**<u>ದಿನಾಂಕಃ17.11.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಬಿಕೆ ವಕೀಲರಿಂದಃ-</u>**

1ನೇ ಪ್ರತಿವಾದಿ ಸಾವಿತ್ರಮ್ಮ ನನ್ನ ತಾಯಿ ಮತ್ತು ಓದೇಗೌಡ ನನ್ನ ತಂದೆ ಎಂದರೆ ಸರಿ. ನನ್ನ ತಂದೆ 2011ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಓದೇಗೌಡರಿಗೆ ನಾನು ಸೇರಿ 3 ಜನ ಮಕ್ಕಳು ಎಂದರೆ ಸರಿ. ಸತೀಶ, 2ನೇ ಪ್ರತಿವಾದಿ ಮಂಜುಳ ಮತ್ತು ನಾನು ಓದೇಗೌಡರ ಮಕ್ಕಳು ಎಂದರೆ ಸರಿ. ನನ್ನ ಸಹೋದರ ಸತೀಶನಿಗೆ ನಂದಿನಿ ಎಂಬ ಹೆಸರಿನ ಹೆಂಡತಿ ಇದ್ದಾಳೆ ಎಂದರೆ ಸರಿ. ಸತೀಶ ಮತ್ತು ನಂದಿನಿ ದಾಂಪತ್ಯದಲ್ಲಿ 3ನೇ ಪ್ರತಿವಾದಿ ಸಹನ ಎಂಬ ಹೆಣ್ಣು ಮಗಳು ಜನಿಸಿದ್ದಾಳೆ ಎಂದರೆ ಸರಿ. 3ನೇ ಪ್ರತಿವಾದಿ ಜನಿಸಿದ 10 ತಿಂಗಳಿಗೆ ದಿನಾಂಕ 29.04.2006ರಲ್ಲಿ ನನ್ನ ಸಹೋದರ ಸತೀಶ ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದಾನೆ ಎಂದರೆ ಸರಿ. ನನ್ನ ಸಹೋದರ ತೀರಿಕೊಂಡ ನಂತರ ಆತನ ಹೆಂಡತಿ ತನ್ನ ತಾಯಿ ಮನೆ ಗೆಜ್ಜಲಗೆರೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ಸತೀಶ್ ರವರ ಮರಣದ ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆಯನ್ನು ತೋರಿಸಿ ಇದೇನಾ ತಮ್ಮ ಸಹೋದರನ ಮರಣದ ಕಾರ್ಡ್ ಎಂದು ತೋರಿಸಲಾಗಿ ಸಾಕ್ಷಿ ಒಪ್ಪಿದ ಮೇರೆಗೆ ಸತೀಶನ ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆಯನ್ನು ನಿಡಿ-10 ಎಂದು ಗುರುತಿಸಲಾಯಿತು. ದಾವಾ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ನನ್ನ ತಂದೆ ಸ್ವಯಾರ್ಜಿತ ಆಸ್ತಿಗಳು ಎಂದಿದ್ದು ಅವು ಯಾರಿಂದ ಖರೀದಿ ಮಾಡಿದ್ದು ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಬದುಕಿದ್ದಾಗ ದಾವಾ ಆಸ್ತಿಗಳ ಭಾಗ ಏನಾದರೂ ಮಾಡಿಕೊಟ್ಟಿದ್ದರ ಎಂದರೆ ಇಲ್ಲ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ಪೌತಿ ಖಾತೆ ಆಗಿದೆ ಎಂದರೆ ಸರಿ. ದಾವಾ ಆಸ್ತಿಗಳನ್ನು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ದಾನ ಪತ್ರ ಮಾಡಿಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿ. ದಾವಾ ಹೂಡುವ ಕಾಲಕ್ಕೆ 3ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಿದ್ದೀರ ಎಂದರೆ ಅವರು ಇರುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 3ನೇ ಪ್ರತಿವಾದಿ ವಿವಾಹವು ದಿನಾಂಕ 01.11.2023ರಲ್ಲಿ ಆಗಿದೆ ಎಂದರೆ ಸರಿ. ಸದರಿ ಮದುವೆಗೆ ನಾನು, 1 ಮತ್ತು 2ನೇ ಪ್ರತಿವಾದಿ ಹಾಗೂ ನನ್ನ ದೊಡ್ಡಮ್ಮ ಮತ್ತು ಚಿಕ್ಕಮ್ಮನ ಮಕ್ಕಳು ಮದುವೆಗೆ ಸೇರಿದ್ದೇವು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ 3ನೇ ಪ್ರತಿವಾದಿಗೂ ಸಹ 1/4 ಭಾಗಾಂಶದ ಹಕ್ಕು ಇದೆ ಎಂದರೆ ಸರಿ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ವಂಶವೃಕ್ಷದಲ್ಲಿ ತನ್ನ ಸಹೋದರ ಹೆಸರು ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ವಂಶವೃಕ್ಷದಲ್ಲಿ ಸತೀಶ ಮತ್ತು ಆತನ ಹೆಂಡತಿ ಹಾಗೂ 3ನೇ ಪ್ರತಿವಾದಿಯನ್ನು ಸೇರಿಸಲು ತೊಂದರೆ ಇತ್ತ ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 3ನೇ

ಪ್ರತಿವಾದಿಯು ಮಂಡ್ಯ ಜಿಲೆ ಮದ್ದೂರು ತಾಲ್ಲುಕು ಗೆಜ್ಜಲಗೆರೆ ಗ್ರಾಮದಲ್ಲಿ ವಾಸವಿದ್ದು ಬೆಳಕೆರೆ ಗ್ರಾಮಕ್ಕೆ ಆಗಾಗ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಗ್ರಾಮದಿಂದ 17 ಕಿ ಮೀ ಅಂತರದಲ್ಲಿ 3ನೇ ಪ್ರತಿವಾದಿ ವಾಸ ಇದ್ದರು ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ಮೃತ ನನ್ನ ಸಹೋದರ ಸತೀಶನ ಮಗಳು ಇರುವ ಬಗ್ಗೆ ಗೊತ್ತಿದ್ದರು ಆಕೆ ಇದ್ದ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ದಾವೆ ಮಾಡಿದ್ದೇವವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 3ನೇ ಪ್ರತಿವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸದರಿ ದಾವೆಯಲ್ಲಿ ಮರೆ ಮಾಚಿ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಹೋದರ ವಾಹನ ಅಪಘಾತದಲ್ಲಿ ತೀರಿಕೊಂಡ ನಂತರ ಪರಿಹಾರದ ಹಣಕ್ಕಾಗಿ 3ನೇ ಪ್ರತಿವಾದಿ ಮತ್ತು 3ನೇ ಪ್ರತಿವಾದಿಯ ತಾಯಿ, 1ನೇ ಪ್ರತಿವಾದಿ ಮತ್ತು ನನ್ನ ತಂದೆ ಅರ್ಜಿ ಹಾಕಿಕೊಂಡಿದ್ದರು ಎಂದರೆ ಸರಿ. ನನ್ನ ತಂದೆ ನನ್ನ ಸಹೋದರ ಸತೀಶ ತೀರಿಕೊಂಡ ನಂತರ ವಾಹನ ಅಪಘಾತ ಪರಿಹಾರ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವ ಆಸ್ತಿಗಳು ನಮ್ಮ ಕುಟುಂಬಕ್ಕೆ ಇವೆಯಾ ಎಂದರೆ ಇಲ್ಲ ಎನ್ನುತ್ತಾರೆ. ಕಾಡುಕೊತ್ತನಹಳ್ಳಿ ಗ್ರಾಮಕ್ಕೆ ಸೇರಿದ ಸ ನಂ.83/1ರಲ್ಲಿ ತಮ್ಮ ಕುಟುಂಬಕ್ಕೆ ಯಾವುದಾದರೂ ಆಸ್ತಿ ಇದೆಯಾ ಎಂದರೆ ಎಲ್ಲ ಎನ್ನುತ್ತಾರೆ. ನನ್ನ ತಂದೆಯ ಒಡಹುಟ್ಟಿದವರು ಇಬ್ಬರು. ನನ್ನ ತಂದೆ ಓದೇಗೌಡ ಸಹೋದರರಾದ ನಿಂಗೇಗೌಡ ಮತ್ತು ಕರಿಗೌಡ ಎನ್ನುತ್ತಾರೆ. ಸ ನಂ.83/1ರ ಳಿಸ್ತೀರ್ಣ 1 ಎಕರೆ 02 ಗುಂಟೆ ಜಮೀನು ನಿಂಗೇಗೌಡ ಪತ್ನಿ ಮತ್ತು ಮಕ್ಕಳು, ಕರೀಗೌಡ ಹಾಗೂ ನನ್ನ ತಾಯಿ ಮತ್ತು ನಾನು ಮತ್ತು ನನ್ನ ಸಹೋದರಿಯ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ. 3ನೇ ಪ್ರತಿವಾದಿಯನ್ನು ಮರೆಮಾಚಿ ದಾವೆ ಮಾಡಿದ ವಿಚಾರ 3ನೇ ಪ್ರತಿವಾದಿಗೆ ತಿಳಿದ ನಂತರ 3ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮನ್ನು ಪಕ್ಷಗಾರರನ್ನಾಗಿ ಸೇರಿಸಬೇಕೆಂದು ಅರ್ಜಿಸಲ್ಲಿಸಿದ ಮೇರೆಗೆ ದಾವೆಯಲ್ಲಿ ಸಲಿಸಿದ ವಿಚಾರ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ 3ನೇ ಪ್ರತಿವಾದಿಗೆ ಭಾಗ ಕೊಡಬೇಕೆಂದು ಆಕೆಗೆ ಮೋಸ ಮಾಡುವ ಉದ್ದೇಶದಿಂದ 1ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲದಿದ್ದರು 2ನೇ ಪ್ರತಿವಾದಿಗೆ ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ 3ನೇ ಪ್ರತಿವಾದಿಯನ್ನು ದಾವೆಗೆ ಸೇರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ